**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಶ್ರೀ ಎಂ.ಎನ್.ಮಾಳಗೇರ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಿರೇಕೆರೂರು, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:**
1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ/2611/2014/ ಸನಿಕಾಸ-1, ದಿನಾಂಕ:03.08.2016
2. ಸಹಾಯಕ ನಿಬಂಧಕರು, ಕಾನೂನು ಅಭಿಪ್ರಾಯ-1 ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ/2611/2014/ ಎಆರ್‌ಎಲ್‌ಓ-1, ದಿನಾಂಕ: 23.08.2016.

****

**ಪ್ರಸ್ತಾವನೆ:**

ಸಹಾಯಕ ನಿಬಂಧಕರು ಕಾನೂನು ಅಭಿಪ್ರಾಯ-1, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಇಂಗಳಗೊಂದಿ ಗ್ರಾಮ ಪಂಚಾಯತಿಯಲ್ಲಿ 2011-12 ಮತ್ತು 2012-13 ರಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನಡೆದ ಕಾಮಗಾರಿಗಳು ಕಳಪೆ ಕಾಮಗಾರಿಗಳಾಗಿದ್ದು ಮತ್ತು ಬಸವ ವಸತಿ ಯೋಜನೆಯಡಿ ಮನೆಗಳನ್ನು ಮಂಜೂರು ಮಾಡಿದ್ದು, ಆ ಮನೆಗಳು ನಿರ್ಮಾಣವಾಗದಿದ್ದರೂ ಸಹ ಹಣ ಪಾವತಿಸಿರುತ್ತಾರೆಂದು, ಆರೋಪಿಸಿ, ಹಿರೇಕೆರೂರು ತಾಲ್ಲೂಕು ಗುಂಡಗಟ್ಟಿ ಗ್ರಾಮದ ನಿವಾಸಿಯಾದ ಶ್ರೀ ಮಂಜಪ್ಪ ಚನ್ನಳ್ಳಿ ಬಿನ್ ಭರಮಪ್ಪ ಚನ್ನಳ್ಳಿ, ಇವರು ಈ ಕೆಳಕಂಡ ಅಧಿಕಾರಿಗಳ ವಿರುದ್ಧ ನೀಡಿದ್ದ ದೂರಿನನ್ವಯ ಕರ್ನಾಟಕ ಲೋಕಾಯುಕ್ತ

ಕಾಯ್ದೆ 1984ರ ಕಾಯ್ದೆ ಕಲಂ-9 ರನ್ವಯ ತನಿಖೆಯನ್ನು ಹಾವೇರಿ ಜಿಲ್ಲಾ ಲೋಕಾಯುಕ್ತ ಸಂಸ್ಥೆಯ, ಪೊಲೀಸ್ ಉಪಾಧೀಕ್ಷಕರು, ಇವರಿಂದ ನಡೆಸಿ ವರದಿಯನ್ನು ಪಡೆಯಲಾಗಿರುತ್ತದೆ ಎಂದು ವರದಿಯಲ್ಲಿ ನಮೂದಿಸಲಾಗಿರುತ್ತದೆ.

| ಕ್ರ.ಸಂ | ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ | ಎದುರುದಾರರ ಸಂಖ್ಯೆ: |
|---|---|---|
| 1. | ಎಂ.ಎನ್.ಮಾಳಗೇರ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಿರೇಕೆರೂರು | 1 |
| 2. | ದೇವರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇಂಗಳಗೊಂಡಿ ಗ್ರಾಮ ಪಂಚಾಯತಿ, | 2 |
| 3. | ಎಸ್.ಎಂ.ಬಣಕಾರ್, ಕಾರ್ಯದರ್ಶಿ, ಇಂಗಳಗೊಂದಿ ಗ್ರಾಮ ಪಂಚಾಯತಿ, | 3 |
| 4. | ಲಿಂಗರಾಜ ಹೊಗಿಸೊಪ್ಪಿನವರ, ಕರವಸೂಲಿಗಾರ, ಇಂಗಳಗೊಂದಿ, ಗ್ರಾಮ ಪಂಚಾಯತಿ | 4 |
| 5. | ಎ.ಪಿ.ಪೂಜಾರ, ಜಲಾನಯನ ಅಧಿಕಾರಿ | 5 |
| 6. | ಓಂಕಾರ ನಾಯ್ಕ, ಸಹಾಯಕ ಅಭಿಯಂತರರು, | 6 |
| 7. | ರೇವಣಪ್ಪ, ತಾಲ್ಲೂಕು ಪಂಚಾಯತಿ ನೋಡಲ್ ವಸತಿ ಅಧಿಕಾರಿ. | 7 |

ದೂರುದಾರರಾದ ಶ್ರೀ ಮಂಜಪ್ಪ ಚನ್ನಳ್ಳಿ ಬಿನ್ ಭರಮಪ್ಪ ಚನ್ನಳ್ಳಿ, ಇವರು ನೀಡಿದ್ದ ದೂರಿನ ಬಗ್ಗೆ ಹಾವೇರಿ ಜಿಲ್ಲಾ ಲೋಕಾಯುಕ್ತ ಸಂಸ್ಥೆಯ ಪೋಲಿಸ್ ಉಪಾಧೀಕ್ಷಕರು, ನೀಡಿರುವ ವರದಿಯಲ್ಲಿ ಈ ಕೆಳಕಂಡ ಅಂಶ ಕಂಡು ಬಂದಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಲ್ಲಿ ವರದಿ ಮಾಡಲಾಗಿರುತ್ತದೆ.

1. ಗುಂಡಗಟ್ಟಿ ಗ್ರಾಮದ ಶ್ರೀ ನಾಗೇಶಪ್ಪ, ರವರ ಮನೆಯಿಂದ ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗೆ ಪಕ್ಕಾ ಗಟಾರ ಹಾಗೂ ದುರಸ್ತಿ ಇದ್ದು, ಅದರಲ್ಲಿ 80 ಮೀಟರ್

ಗಟಾರ ಮಾಡಿದ್ದು, ಆದರೆ ಆ 80 ಮೀಟರ್ ಗಟಾರವನ್ನೇ ಮಾಡಿರುವುದಿಲ್ಲ ಎಂಬುದಾಗಿದ್ದು, ತನಿಖಾಧಿಕಾರಿಗಳು 80 ಮೀಟರ್ ಪಕ್ಕಾ ಗಟಾರ ಮಾಡಿದ್ದು, ಕಂಡು ಬರುತ್ತಿದೆ, ಇನ್ನು 80 ಮೀಟರ್ ಗಟಾರ ದುರಸ್ತಿ ಮಾಡಿರುವುದು ಗ್ರಾಮಸ್ಥರಿಂದ ತಿಳಿದು ಬರುತ್ತದೆ. ಆದರೆ ಆ ದುರಸ್ತಿಯನ್ನು ಸರಿಯಾದ ರೀತಿ ಮಾಡಿರುವುದು ಕಂಡು ಬರುವುದಿಲ್ಲ, ಅಲ್ಲೇ ವೀರಭದ್ರೇಶ್ವರ ದೇವಸ್ಥಾನದವರೆಗೆ ಸುಮಾರು 50 ಅಡಿಯಷ್ಟು ಚರಂಡಿ ಇರುವುದಿಲ್ಲ, ಈ ಕಾಮಗಾರಿ ಅಂದಾಜು ಪಟ್ಟಿಗೆ ತಕ್ಕಂತೆ ಆಗದೇ ಇರುವುದು ಕಂಡು ಬಂದಿದೆ.

2. ಗುಂಡಗಟ್ಟಿ ಗ್ರಾಮದ ತುಂಬುವ ಹೊಂಡಕ್ಕೆ ಪೌಂಟಿಂಗ್ ಮಾಡುವ ಕಾಮಗಾರಿಯಲ್ಲಿ ಹಳೆಯ ಕಲ್ಲುಗಳನ್ನು ಬಳಸಿಕೊಂಡು ಕಾಮಗಾರಿ ಮಾಡಿರುತ್ತಾರೆ. ಅದು ಕಳಪೆಯಾಗಿರುತ್ತದೆಂದು ತನಿಖಾಧಿಕಾರಿಗಳು ಆ ಎರಡು ಪೌಂಟಿಂಗ್‌ಗಳನ್ನು ಪರಿಶೀಲನೆ ಮಾಡಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತವೆ. ಆ ಕಾಮಗಾರಿಯಲ್ಲಿ ಮೆಟ್ಟಿಲುಗಳಿಗೆ ಉಪಯೋಗಿಸಿದ ಕಲ್ಲುಗಳು ಹಳೆಯ ಕಲ್ಲುಗಳಿದ್ದಂತೆ ಕಂಡು ಬರುತ್ತವೆ. ಈ ಬಗ್ಗೆ ದೂರುದಾರರು ಸದರಿ ಕಲ್ಲುಗಳು ಹಳೆಯ ಕಲ್ಲುಗಳೆಂದು ತೋರಿಸಿರುತ್ತಾರೆಂದು ವರದಿಸಿರುತ್ತಾರೆ.

3. ಗುಂಡಗಟ್ಟಿ ಗ್ರಾಮದಲ್ಲಿ ಕೊಪ್ಪದ ಕೆರೆಯವರೆಗೆ ನೀರು ಬರುವ ಕಾಲುವೆ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣದ ಕಾಮಗಾರಿ ಅಸಮರ್ಪಕವಾಗಿರುವ ಬಗ್ಗೆ, ತನಿಖಾಧಿಕಾರಿಗಳು ಆ ಕಾಮಗಾರಿ ಕಳಪೆಯಾಗಿರುತ್ತದೆ, ಅದು ಅಂದಾಜು ಪಟ್ಟಿಗೆ ತಕ್ಕಂತೆ ನಿರ್ಮಾಣ ಆಗಿರುವುದಿಲ್ಲ. ನೀರು ಬರುವ ಕಾಲುವೆಯನ್ನು ನಿರ್ವಹಿಸಿರುವುದಿಲ್ಲ, ಸದರಿ ಕಾಮಗಾರಿಯನ್ನು ಜಲಾನಯನ ಇಲಾಖೆಯವರು ನಿರ್ಮಾಣ ಮಾಡಿರುತ್ತಾರೆಂದು ಹೇಳಿದ್ದಾರೆ.

4. ದೂರುದಾರರು, ರಾಜೀವ್ ಗಾಂಧಿ ಮತ್ತು ಬಸವ ವಸತಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಮನೆಗಳನ್ನು ಕಟ್ಟಿಕೊಳ್ಳದೇ ಅವರ ಹೆಸರಿನಲ್ಲಿ ಬೇರೆಯವರು ಮನೆ ಕಟ್ಟಿಕೊಂಡಿರುತ್ತಾರೆ, ಪಂಚಾಯತ್‌ರವರು ತಪ್ಪಾಗಿ ಚೆಕ್ಕುಬಂದಿಯಲ್ಲಿ ಫಲಾನುಭವಿಗಳು ಮನೆ ಕಟ್ಟಿಕೊಂಡಿರುವುದಿಲ್ಲ. ಪಂಚಾಯತ್‌ರವರು ನೀಡಿರುವ ಚೆಕ್ಕುಬಂದಿಯಲ್ಲಿ ಮನೆ ನಿರ್ಮಾಣ ಮಾಡಿದ್ದು ಕಂಡು

ಬರುತ್ತದೆ, ಅಂದರೆ ಆಯ್ಕೆಯಾದ ಫಲಾನುಭವಿಗಳ ಹೆಸರಿನಲ್ಲಿ ಬೇರೆಯವರು ಮನೆ ಕಟ್ಟಿಕೊಂಡಿರುವುದು ಕಂಡು ಬಂದಿರುತ್ತದೆ. ಆದರೆ, ಬಿಲ್ಲುಗಳನ್ನು ಆಯ್ಕೆಯಾದ ಫಲಾನುಭವಿಗಳ ಹೆಸರಿನಲ್ಲಿ ತೆಗೆದಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

ಹಾವೇರಿ ಜಿಲ್ಲೆಯ ಲೋಕಾಯುಕ್ತ ಸಂಸ್ಥೆಯ ಪೋಲಿಸ್ ಉಪಾಧೀಕ್ಷಕರು, ಇವರು ನೀಡಿದ್ದ ತನಿಖಾ ವರದಿಗೆ ಆರೋಪಿತ ಅಧಿಕಾರಿ/ನೌಕರರುಗಳಿಗೆ ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟಿಸುಗಳಿಗೆ ಅಧಿಕಾರಿ/ನೌಕರರುಗಳು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳು, ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, 11 ಕಾಮಗಾರಿಗಳ ಪೈಕಿ 3 ಕಾಮಗಾರಿಗಳು ಕಳಪೆ ಗುಣಮಟ್ಟದ್ದಾಗಿದೆ ಮತ್ತು ರಾಜೀವ್ ಗಾಂಧಿ ಹಾಗೂ ಬಸವ ವಸತಿ ಯೋಜನೆ ಅಡಿ ಆಯ್ಕೆಯಾದ ಫಲಾನುಭವಿಗಳು ಮನೆ ಕಟ್ಟಿಕೊಳ್ಳದೇ ಅವರ ಹೆಸರಿನಲ್ಲಿ ಬೇರೆಯವರು ಮನೆ ಕಟ್ಟಿಕೊಂಡಿರುವುದು ಕಂಡು ಬಂದಿದೆ, ಆದರೆ ಆಯ್ಕೆಯಾದ ಫಲಾನುಭವಿಗಳ ಹೆಸರಿನಲ್ಲಿ ಬಿಲ್ ತೆಗೆದಿರುವುದು ಕಂಡು ಬಂದಿದೆ. ಆದರೆ ಆಯ್ಕೆಯಾದ ಫಲಾನುಭವಿಗಳ ಹೆಸರಿನಲ್ಲಿ ಬಿಲ್ ತೆಗೆದಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ. ಗುಂಡಗಟ್ಟಿ ಗ್ರಾಮದಲ್ಲಿ ಗೌಂಡಿ ನಾಗೇಶಪ್ಪನ ಮನೆಯಿಂದ ವೀರಭದ್ರೇಶ್ವರ ದೇವಸ್ಥಾನದವರೆಗೆ ಗಟಾರ ನಿರ್ಮಾಣ ಹಾಗೂ ಪಕ್ಕಾ ಗಟಾರ ದುರಸ್ಥಿಗೆ ರೂ. 3 ಲಕ್ಷ 2012–13ನೇ ಸಾಲಿನಲ್ಲಿ ಮಂಜೂರಾಗಿದೆ. 2012–13ನೇ ಸಾಲಿನಲ್ಲಿ ಗುಂಡಗಟ್ಟಿ ಗ್ರಾಮದಲಿ ಮಡುವಿನ ಕೆರೆಯ ತುಂಬುವ ಹೊಂಡಕ್ಕೆ ಮೆಟ್ಟಿಲು ಮಾಡಲು ರೂ. 2 ಲಕ್ಷ ಮಂಜೂರಾಗಿದೆ, ಅದೇ ರೀತಿ ರಾಜೀವ್ ಗಾಂಧಿ ಮತ್ತು ಬಸವ ವಸತಿ ಯೋಜನೆಯಡಿ ಒಟ್ಟು 7 ಮನೆಗಳು ಮಂಜೂರಾಗಿದ್ದು, ತಲಾ ಒಂದು ಮನೆಗೆ ರೂ. 50,000/–ಗಳಂತೆ ಒಟ್ಟು ರೂ. 3,50,000/–ಮಂಜೂರಾಗಿದೆ. ಒಟ್ಟು ಈ ಎಲ್ಲಾ ಕಾಮಗಾರಿಗಳಿಗೆ ರೂ. 9,00,000/– ಹಣ ಮಂಜೂರಾಗಿದ್ದು, ಈ ಕಾಮಗಾರಿಗಳು ಕಳಪೆಯಾಗಿರುವುದರಿಂದ, ಒಟ್ಟು ರೂ. 13,45,943/– ಹಣ ದುರುಪಯೋಗವಾಗಿರುವುದು ಕಂಡು ಬಂದಿದೆ. ಅದರಲ್ಲಿ ಗುಂಡಗಟ್ಟಿ ಗ್ರಾಮದ ಕೊಪ್ಪದ ಕೆರೆಗೆ ನೀರು ಬರುವ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗೆ 2012–13ನೇ ಸಾಲಿನಲ್ಲಿ ರೂ. 4,45,943/–ಗಳು ಬಿಡುಗಡೆಯಾಗಿದ್ದು, ಆ ಕಾಮಗಾರಿಯನ್ನು ಜಲಾನಯನ ಅಭಿವೃದ್ಧಿ ಇಲಾಖೆಯವರು ನಿರ್ವಹಣೆ ಮಾಡಿರುತ್ತಾರೆ. ಕಾರಣ 5ನೇ ಎದುರುದಾರರು ಸದರಿ ರೂ 4,45,943/– ಜವಾಬ್ದಾರರಾಗಿರುತ್ತಾರೆಂದು, ಸದರಿ ಕಳಪೆ ಕಾಮಗಾರಿ, ಹಣ ದುರುಪಯೋಗ ಮತ್ತು ಕರ್ತವ್ಯ ಲೋಪಕ್ಕೆ 1 ರಿಂದ 6ನೇ ಎದುರುದಾರರು ಜವಾಬ್ದಾರರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಹಾಗೂ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು, ಅವರುಗಳು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳು

ಸಮಂಜಸ/ತೃಪ್ತಿಕರವಾಗಿಲ್ಲದೆ ಇರುವುದರಿಂದ, ಸದರಿಯವರುಗಳು ಸರ್ಕಾರಿ ನೌಕರರಾಗಿ ಸಂಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ, ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಯ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿ 1-6 ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸುವಂತೆ, ಮಾನ್ಯ ಉಪಲೋಕಾಯುಕ್ತರು-1, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು/ಅದರೊಂದಿಗೆ ಅಡಕವಾಗಿರು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು 1-6 ಇವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಹಾಗೂ ಸದರಿ 6 ಅಧಿಕಾರಿ/ನೌಕರರುಗಳ ಪೈಕಿ, ಎದುರುದಾರರು 5 ರವರಾದ ಶ್ರೀ ಎ.ಬಿ.ಪೂಜಾರ, ಜಲಾನಯನ ಅಧಿಕಾರಿ, ಇವರ ಸೇವೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಇಲ್ಲದೇ ಇರುವುದರಿಂದ, ಇವರಿಗೆ ಸಂಬಂಧಿಸಿದಂತೆ, ಮಾನ್ಯ ಉಪಲೋಕಾಯುಕ್ತರು-1 ರವರ ಶಿಫಾರಸ್ಸಿನಂತೆ, ಕ್ರಮವಹಿಸುವಂತೆ, ಅಧಿಕಾರಿಯ ಮಾತೃ ಇಲಾಖೆಯಾದ ಕೃಷಿ ಇಲಾಖೆಯನ್ನು ಕೋರಲಾಗಿರುತ್ತದೆ. ಇನ್ನುಳಿದ 5 ಅಧಿಕಾರಿಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಪಲೋಕಾಯುಕ್ತರು-1, ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ, ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ, ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು, ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ, ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲು, ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 169 ವಿಸೇಬಿ 2016 ಬೆಂಗಳೂರು ದಿನಾಂಕ:16-09-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಕೆಳಕಂಡ 5 ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು

ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

| ಕ್ರ.ಸಂ | ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ | ಎದುರುದಾರರ ಸಂಖ್ಯೆ: |
|---|---|---|
| 1. | ಎಂ.ಎನ್.ಮಾಳಗೇರ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಿರೇಕೆರೂರು | 1 |
| 2. | ದೇವರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇಂಗಳಗೊಂಡಿ ಗ್ರಾಮ ಪಂಚಾಯತಿ. | 2 |
| 3. | ಎಸ್.ಎಂ.ಬಣಕಾರ್, ಕಾರ್ಯದರ್ಶಿ, ಇಂಗಳಗೊಂಡಿ ಗ್ರಾಮ ಪಂಚಾಯತಿ. | 3 |
| 4. | ಲಿಂಗರಾಜ ಹೊಗಿಸೊಪ್ಪಿನವರ, ಕರವಸೂಲಿಗಾರ, ಇಂಗಳಗೊಂಡಿ, ಗ್ರಾಮ ಪಂಚಾಯತಿ | 4 |
| 5. | ಓಂಕಾರ ನಾಯ್ಕ, ಸಹಾಯಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ ಹಿರೇಕೆರೂರು. | 6 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

16/9/2016

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಹಾವೇರಿ.
5) ನಿರ್ದೇಶಕರು (ಪಂ.ರಾಜ್-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6) ಸಹಾಯಕ ನಿಬಂಧಕರು ಕಾನೂನು ಅಭಿಪ್ರಾಯ-1, ಎ.ಆರ್.ಎಲ್.ಓ-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.

7) ಸರ್ಕಾರದ ಅಧೀನ ಕಾರ್ಯದರ್ಶಿ,(ಸೇವೆಗಳು) ಕೃಷಿ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
8) ಸರ್ಕಾರದ ಅಧೀನ ಕಾರ್ಯದರ್ಶಿ,(ಸೇವೆಗಳು-ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
9) ಸಂಬಂಧಿಸಿದ ಅಧಿಕಾರಿಗಳಿಗೆ.(ಮು.ಕಾ.ನಿ.ಅ.ಜಿಪಂ. ಹಾವೇರಿ ಇವರ ಮುಖಾಂತರ)

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.